**ಸಾಕ್ಷಿದಾರರು ಹಾಜರಿದ್ದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತುಃ**

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಕೆ ವಿ ಓ ವಕೀಲರಿಂದಃ**

ಪ್ರಮಾಣ ಪತ್ರದಲ್ಲಿ ಇರುವ ವಿಚಾರ ಮತ್ತು ಪ್ರಾಮಿಸರಿ ಪತ್ರದಲ್ಲಿ ಇದ್ದ ಒಕ್ಕಣಿಕೆ ನಾನು ಪೂರ್ತಿ ತಿಳಿದುಕೊಂಡಿರುತ್ತೇನೆ. ನಾನು ಅಳಗವಾಡಿಯಲ್ಲಿ ವಾಸ ಮಾಡುತ್ತಿದ್ದೆ. ಪ್ರಾಮಿಸರಿ ಪತ್ರದ ಸಮಯದಲ್ಲೂ ಕೂಡ ಅಳಗವಾಡಿಯಲ್ಲೆ ವಾಸ ಮಾಡುತ್ತಿದ್ದೆ. ನನ್ನ ಗಂಡನ ಊರು ಚಂದ್ರವಾಡ. ನಾನು ಗಂಡನ ಮನೆ ಬಿಟ್ಟು ಅಳಗವಾಡಿಯಲ್ಲಿ ಎಂದೂ ವಾಸ ಮಾಡಿಲ್ಲ ಎಂದರೆ ಸರಿಯಲ್ಲ. ಪ್ರಾಮಿಸರಿ ಪತ್ರ ಪ್ರತಿವಾದಿ ಹನುಮಂತಪ್ಪ ತಂದು ಕೊಟ್ಟಿರುತ್ತಾರೆ. ಪ್ರತಿವಾದಿ ಪ್ರಾಮಿಸರಿ ಪತ್ರ ಎಲ್ಲಿಂದ ತಂದು ಕೊಟ್ಟ ಅದು ಗೊತ್ತಿಲ್ಲ ಆದರೆ ಪ್ರಾಮಿಸರಿ ಪತ್ರ ಬರೆಸಿಕೊಂಡು ಬಂದು ನನಗೆ ನೀಡಿರುತ್ತಾರೆ. ಎಲ್ಲಿ ಪ್ರಾಮಿಸರಿ ಪತ್ರ ಬರೆದಿದ್ದಾರೆ ಅಂತ ನಾನು ತಿಳಿದುಕೊಂಡಿಲ್ಲ. ಪ್ರಾಮಿಸರಿ ಪತ್ರಕ್ಕೆ ಯಾರು ಯಾರು ಸಹಿ ಮಾಡಿರುತ್ತಾರೆ ಎಂದರೆ ಹೌದು. ಪ್ರಾಮಿಸರಿ ಪತ್ರಕ್ಕೆ ಅಂಜಿನಪ್ಪ, ಪ್ರಕಾಶ್ ಮತ್ತು ಹನುಮಂತಪ್ಪ ಸಹಿ ಮಾಡಿರುತ್ತಾರೆ. ಪ್ರಾಮಿಸರಿ ಪತ್ರಕ್ಕೆ ನನ್ನ ಸಮಕ್ಷಮದಲ್ಲೆ ಅಂಜಿನಪ್ಪ, ಪ್ರಕಾಶ್ ಮತ್ತು ಹನುಮಂತಪ್ಪ ಸಹಿ ಮಾಡಿದ್ದಾರ ಎಂದರೆ ಹೌದು. ನಿಪಿ-1 ರಲ್ಲಿ ಕೊನೆಯಲ್ಲಿ ಪೆನ್ಸಿಲ್ ನಿಂದ ಮಾರ್ಕ್ ಮಾಡಿದ್ದಾರೆ ಎಂದರೆ ಹೌದು. ನನ್ನ ಸಮಕ್ಷಮದಲ್ಲಿ ಸಹಿ ಮಾಡಿದ ಪಕ್ಷದಲ್ಲಿ ನಿಪಿ-1 ರಲ್ಲಿ ಪೆನ್ಸಿಲ್ ನಿಂದ ಮಾರ್ಕ್ ಮಾಡುವ ಅಗತ್ಯ ಇರುವುದಿಲ್ಲ ಎಂದರೆ ಅವರು ಆ ಕಡೆ ಸಹಿ ಮಾಡಬಹುದು ಅಂತ ಮಾಡಿರಬಹುದು ಎಂದು ಹೇಳುತ್ತಾರೆ. ನಿಪಿ-1 ರ ವ್ಯವಹಾರ ಅಳಗವಾಡಿಯ ನನ್ನ ಮನೆಯಲ್ಲಿ ನಡೆದಿದೆ. ಪ್ರಾಮಿಸರಿ ಪತ್ರ ಯಾರು ಯಾರು ಬರೆದು ಕೊಟ್ಟಿದ್ದಾರೆ ಗೊತ್ತಿಲ್ಲ. ನಿಪಿ-1 ರ 2 ನೇ ಪುಟದಲ್ಲಿ ಅಂಜಿನಪ್ಪ, ಪ್ರಕಾಶ್ ಮತ್ತು ಹನುಮಂತಪ್ಪ ಹಣ ಪಡೆದಿದ್ದಾರೆ ಅಂತ ಬರೆದಿದೆ ಎಂದರೆ ಹೌದು. ಒಕ್ಕಣಿಕೆ ಬರೆದಾಗ ಆ ವ್ಯಕ್ತಿಯ ಹೆಸರು ವಿಳಾಸ ಇರಬೇಕು ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ, ನಮ್ಮ ವಕೀಲರಿಗೆ ಗೊತ್ತು ಎಂದು ಹೇಳುತ್ತಾರೆ. ನಿಪಿ-1 ರ ಮೊದಲ ಪುಟದಲ್ಲಿ ಹನುಮಂತಪ್ಪ ಮತ್ತು ಪ್ರಕಾಶ್ ಎನ್ನುವ ಒಕ್ಕಣಿಕೆ ಇದೆ ಎಂದರೆ ಹೌದು. ನಿಪಿ-1 ಕ್ಕೆ ಪ್ರಕಾಶ್ ರವರ ಸಹಿ ಯಾಕೆ ಮಾಡಿಸಿಕೊಂಡಿದ್ದಿರ ಎಂದರೆ ಸುಮ್ಮನೆ

ನಿಂತಿರುತ್ತಾರೆ. ನಿಪಿ-1 ನನ್ನ ಸಮ್ಮುಖದಲ್ಲಿ ಟೈಪ್ ಆಗಿಲ್ಲ ಎಂದರೆ ಹೊರಗಡೆ ಇಂದ ಟೈಪ್ ಮಾಡಿಸಿಕೊಂಡು ಬಂದಿದ್ದಾರೆ ಎನ್ನುತ್ತಾರೆ. 8 ಲಕ್ಷ ಹಣ 500, 100 ರುಪಾಯಿ ಮುಖಬೆಲೆಯ ನೋಟುಗಳು ಕೊಟ್ಟಿರುತ್ತೇನೆ. ಹಣವನ್ನು ನಾನು ನಗದು ರೂಪದಲ್ಲೆ ಕೊಟ್ಟಿರುತ್ತೇನೆ. 8 ಲಕ್ಷ ರೂಪಾಯಿ ಹಣ ವ್ಯವಸಾಯದಿಂದ ಬಂದ ಹಣ ಮನೆಯಲ್ಲಿ ಇತ್ತು ಅದನ್ನು ನಾನು ಕೊಟ್ಟಿರುತ್ತೇನೆ. ವ್ಯವಸಾಯದಿಂದ ಹಣ ಬಂತು ಅಂತ ಹೇಳುವ ಬಗ್ಗೆ ಯಾವುದಾದರು ದಾಖಲೆ ಹಾಜರು ಮಾಡಿದ್ದೀರ ಎಂದರೆ ಇಲ್ಲ. ದಿನಾಂಕ 01.04.2023 ರಂದು ಪ್ರಾಮಿಸರಿ ಪತ್ರ ಬರೆಯಲಾಯಿತ ಎಂದರೆ ಇಲ್ಲ. ಸಾಕ್ಷಿಯು ಹೇಳುವುದೇನೆಂದರೆ ಆ ದಿನ ಹಣದ ತುಂಬ ಅಗತ್ಯ ಇದೆ ಅಂತ ಕೇಳಿರುತ್ತಾರೆ ಆದ್ದರಿಂದ ಆ ದಿನ ಹಣ ಕೊಟ್ಟಿರುತ್ತೇನೆ ನಂತರ ಪ್ರಾಮಿಸರಿ ಪತ್ರ ಆಗಿರುತ್ತದೆ. ದಿನಾಂಕ 01.04.2023 ರಂದೇ ಪ್ರಾಮಿಸರಿ ಪತ್ರ ಬರೆಸಿಕೊಳ್ಳಲು ಏನು ತೊಂದರೆ ಇತ್ತು ಎಂದರೆ ಅವರು ಹಣ ತುರ್ತಾಗಿ ಬೇಕು ಅಂತ ಕೇಳಿದ್ದರು ಆದ್ದರಿಂದ ಆ ದಿನ ಬರೆಸಿಕೊಳ್ಳಲು ಆಗಲಿಲ್ಲ. ಬೆಳಗ್ಗೆ ಬಂದು ಸ್ಟಾಂಪ್ ಪೇಪರನ್ನು ಟೈಪ್ ಮಾಡಿಸಿ ತಂದು ಕೊಟ್ಟರು ಸಮಯ ಗೊತ್ತಿಲ್ಲ. ಚಿತ್ರದುರ್ಗದಿಂದ ನನ್ನ ಊರಿಗೆ ಮತ್ತು ನನ್ನ ಊರಿನಿಂದ ದಾವಣಗೆರೆಗೆ ಸುಮಾರು 02 ಗಂಟೆ ಸಮಯ ಬೇಕು ಎಂದರೆ ಇಲ್ಲ ನಮ್ಮ ಊರಿನಿಂದ ಚಿತ್ರದುರ್ಗಕ್ಕೆ ಅರ್ಧ ಗಂಟೆ ಸಾಕು ಮತ್ತು ನಮ್ಮ ಊರಿನಿಂದ ದಾವಣಗೆರೆಗೆ ಮುಕ್ಕಾಲು ಗಂಟೆ ಸಾಕು. ಅಳಗವಾಡಿ ಊರಿನ ರಸ್ತೆ ಸರಿಯಿಲ್ಲ. ಆದ್ದರಿಂದ 02 ಗಂಟೆ ಪ್ರಯಾಣಿಸಲು ಸಮಯ ಬೇಕು ಎಂದರೆ ಸರಿಯಲ್ಲ. ಪ್ರಾಮಿಸರಿ ಪತ್ರ ಎಲ್ಲಿಂದ ತಂದಿದ್ದಾರೆ ನನಗೆ ಗೊತ್ತಿಲ್ಲ. ಪ್ರಾಮಿಸರಿ ಪತ್ರ ವ್ಯವಹಾರ ಆಗಿಲ್ಲ ಸಾಕ್ಷಿಗಳ ಜೊತೆ ಸೇರಿ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

2. ನನಗೆ ಇಬ್ಬರು ಮಕ್ಕಳು. ನನ್ನ ಮಗಳ ಮತ್ತು ಪ್ರತಿವಾದಿ ನಡುವೆ ಹಿಂದೆ ಒಂದು ಕ್ರಯದ ಕರಾರು ಪತ್ರ ಆಗಿದೆ ಎಂದರೆ ನನಗೆ ಆ ಬಗ್ಗೆ ಗೊತ್ತಿಲ್ಲ ಅದು ನನ್ನ ವ್ಯವಹಾರ ಅಲ್ಲ ಎಂದು ಹೇಳುತ್ತಾರೆ. ನನ್ನ ಮಗಳು ಗಂಗನಕಟ್ಟೆಯಲ್ಲಿ ವಾಸ ಮಾಡುತ್ತಾರೆ. ನನ್ನ ಮಗಳಿಗೂ ಪ್ರತಿವಾದಿಗೂ ಪರಿಚಯ ಇಲ್ಲ ಎಂದರೆ ಸರಿಯಲ್ಲ.

ಕ್ರಯದ ಕರಾರಿನ ವ್ಯವಹಾರ ನನ್ನ ಮನೆಯಲ್ಲಿಯೇ ನಡೆಯಿತು ಎಂದರೆ ಇರಬಹುದು ಆದರೆ ಆ ಕ್ರಯದ ವ್ಯವಹಾರ ಮಾಡಿಕೊಂಡಿರುವುದು ನನಗೆ ಗೊತ್ತಿಲ್ಲ ಮತ್ತು ಈ ಕೇಸಿಗೂ ಆ ಕ್ರಯದ ಕರಾರಿಗು ಸಂಬಂದ ಇಲ್ಲ ಎಂದು ಹೇಳುತ್ತಾರೆ. ಪ್ರತಿವಾದಿಯರು ಅಡಿಕೆ ತೋಟ ಇಟ್ಟುಕೊಂಡು ಜೀವನ ಮಾಡಿಕೊಂಡಿದ್ದಾರೆ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ಸಾಮಾನ್ಯವಾಗಿ 8 ಲಕ್ಷ ಹಣ ಕೊಡಬೇಕು ಎಂದಾಗ ಆ ವ್ಯಕ್ತಿಯ ಸಾಮಾರ್ಥ್ಯ ನೋಡಿ ಕೊಡಬೇಕು ಎಂದರೆ ಹೌದು ಆದರೆ ಅವರಿಗೆ ಏನು ತೊಂದರೆ ಇತ್ತು ಗೊತ್ತಿಲ್ಲ ಆದರೆ ತುಂಬಾ ಹಿಂಸೆ ಕೊಟ್ಟಿದ್ದಕ್ಕೆ ನಾನು ಹಣ ಕೊಟ್ಟೆ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲವಕಾಶ ಕೋರುತ್ತಾರೆ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚುಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**1 ನೇ ಅಪರ ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್.ಸಿ.**
**ನ್ಯಾಯಾಧೀಶರು, ಚಿತ್ರದುರ್ಗ**